ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ವಿರಾಜಪೇಟೆ

**ಉಪಸ್ಥಿತರುಃ ಸಂತೋಷ ಕೊಠಾರಿ,**

**ಬಿ.ಎ.ಎಲ್., ಎಲ್.ಎಲ್.ಬಿ.,**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ವಿರಾಜಪೇಟೆ**

# ಸಿ. ಸಿ. ನಂ. 577/2019

ಪಿರ್ಯಾದಿಃ ಶ್ರೀ ಟಿ.ಆರ್ ದಿನೇಶ್,ತಂದೆಃ ಟಿ.ಕೆ ರಾಜನ್,
ವಾಸಃ ಗಾಂಧಿನಗರ,
ವಿರಾಜಪೇಟೆ ಟೌನ್,
ದ.ಕೊಡಗು.

(ಶ್ರೀ.ವಿ.ಜಿ ರಾಕೇಶ್, ವಕೀಲರು,ವಿರಾಜಪೇಟೆ.)

***ವಿರುದ್ಧ***

ಆರೋಪಿಃ ಶ್ರೀ ನಾಯಕಂಡ ಬೋಪಣ್ಣ, ತಂದೆಃಚಿಟ್ಟಿಯ್ಯಪ್ಪ ,
ವಾಸಃ ಕೋಟೋಳಿ ಗ್ರಾಮ, ವಿರಾಜಪೇಟೆ ತಾಲ್ಲೂಕು,
(ಸಾಕ್ಷಿ ಬೇಟೋಳಿ ಗ್ರಾಮ ಎಂದು ತಿಳಿಸಿರುತ್ತಾರೆ)
ದ.ಕೊಡಗು.
(ಶ್ರೀ.ಡಿ.ಸಿ ಧ್ರುವಕುಮಾರ್, ವಕೀಲರು,ವಿರಾಜಪೇಟೆ.)

***::ದಂಡ ಪ್ರಕ್ರಿಯಾ ಸಂಹಿತೆ ವಿಧಿ 313 (1)(ಬಿ) ರಡಿ ದಾಖಲಿಸಿದ ಆರೋಪಿತರ ಹೇಳಿಕೆ ::***

ಪ್ರಶ್ನೆಃ 1 ಪಿರ್ಯಾದುದಾರರ ಸಾಕ್ಷ್ಯವನ್ನು ತಿಳಿದುಕೊಂಡಿರುವಿರಾ?

ಉತ್ತರಃ

ಪ್ರಶ್ನೆಃ 2 ಫ್ರಾಸಾ-1 ಶ್ರೀ ಟಿ.ಆರ್ ದಿನೇಶ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿಯಾದ ನಾಯಕಂಡ ಬೋಪಣ್ಣರವರು ಪಿರ್ಯಾದಿಯವರಿಂದ ವ್ಯಾಪಾರದ ಸಲುವಾಗಿ ತುರ್ತು ಹಣದ ಅವಶ್ಯಕತೆಗಾಗಿ ರೂ.2,00,000/- ಸಾಲವನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆಃ 3 ಫ್ರಾಸಾ 1 ರವರು ಮುಂದುವರೆದು, ಸದರಿ ಕರಾರಿನ ಹಣ ಮರು ಪಾವತಿ ಮಾಡುವ ಸಲುವಾಗಿ ಆರೋಪಿಯಾದ ನೀವು ಚೆಕ್ಕನ್ನು ನೀಡಿದ್ದು ಅದರಲ್ಲಿ ಚೆಕ್ ನಂಬರ್ 311546 ದಿನಾಂಕ

07.03.2019 ರೂ.2,00,000/- ಸಾಲವನ್ನು ತೀರಿಸುವ ಸಲುವಾಗಿ ಕಾರ್ಪೊರೇಶನ್ ಬ್ಯಾಂಕ್, ವಿರಾಜಪೇಟೆ ಶಾಖೆಯ ತಮ್ಮ ಖಾತೆಗೆ ಸಂಬಂಧಿಸಿದ ಚೆಕ್‌ನ್ನು ನೀಡಿದ್ದು, ಅದನ್ನು ನಗದೀಕರಿಸಿಕೊಂಡು ಸಾಲದ ಹಣವನ್ನು ಮರುಪಾವತಿ ಮಾಡಿಕೊಳ್ಳಬೇಕೆಂದು ಆರೋಪಿ ನನಗೆ ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆ: 4 ಫ್ರಾಸಾ 1 ರವರು ಮುಂದುವರೆದು, ನಿಮ್ಮ ಕೋರಿಕೆಯ ಮೇರೆಗೆ ಸದರಿ ಚೆಕ್‌ನ್ನು ಕಾರ್ಪೊರೇಶನ್ ಬ್ಯಾಂಕ್, ವಿರಾಜಪೇಟೆ ಶಾಖೆಯಲ್ಲಿ ನಗದೀಕರಿಸಲು ಸಲ್ಲಿಸಿದೆ ಆದರೆ ಆರೋಪಿಯ ಬ್ಯಾಂಕ್‌ನವರು" Insufficient Funds" ಎಂಬ ಕಾರಣ ನೀಡಿ ದಿನಾಂಕ 17.05.2019 ರಂದು ಚೆಕ್‌ನ್ನು ಅಮಾನ್ಯಗೊಳಿಸಿ ಮೆಮೋದೊಂದಿಗೆ ಹಿಂತಿರುಗಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆ: 5 ಫ್ರಾಸಾ 1 ರವರು ಮುಂದುವರೆದು, ಚೆಕ್ ಅಮಾನ್ಯಗೊಂಡು ಮರಳಿ ಬಂದ ಬಳಿಕ ದಿನಾಂಕಃ 22.05.2019 ರಂದು ಆರೋಪಿಗೆ ತನ್ನ ವಕೀಲರ ಮೂಲಕ ನೋಂದಾಯಿತ ಅಂಚೆಯಲ್ಲಿ ನೋಟೀಸ್ ಕಳುಹಿಸಿ ಚೆಕ್‌ನಲ್ಲಿನ ಹಣವನ್ನು ಪಾವತಿ ಮಾಡಬೇಕೆಂದು ತಗಾದೆ ಮಾಡಿರುತ್ತೇನೆ ಆದರೂ ಸಹಾ ಆರೋಪಿಯು ಚೆಕ್‌ನ ಬಾಬ್ತು ಹಣವನ್ನು ಪಾವತಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆ: 6 ಫ್ರಾಸಾ 1 ರವರು ಮುಂದುವರೆದು, ಆರೋಪಿ ನನಗೆ ವಂಚನೆ ಮಾಡುವ ಉದ್ದೇಶದಿಂದ, ತಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲದೇ ಇದ್ದರೂ ಚೆಕ್‌ನ್ನು ನೀಡಿರುತ್ತಾರೆ ಮತ್ತು ಚೆಕ್ ಹಣವನ್ನು ಪಾವತಿಸಿರುವುದಿಲ್ಲ ಎಂದು ತಿಳಿಸಿ ನಿಪಿ-1 ರಿಂದ ನಿಪಿ-5 ನ್ನು ಗುರುತಿಸಿಕೊಂಡಿದ್ದಾರೆ. ಈ ಬಗ್ಗೆ ನೀವೇನು ಹೇಳಬಯಸುವಿರಿ?

ಉತ್ತರಃ

ಪ್ರಶ್ನೆ: 7 ಮೇಲೆ ಓದಿ ಹೇಳಲಾದ ಪ್ರಶ್ನೆಗಳು ನಿಮಗೆ ಅರ್ಥವಾಯಿತೆ?

ಉತ್ತರಃ

ಪ್ರಶ್ನೆ: 8 ಈ ಮೊಕದ್ದಮೆ ಬಗ್ಗೆ ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ

ಪ್ರಶ್ನೆ: 9 ನಿಮ್ಮ ಪರವಾಗಿ ಅಭಿರಕ್ಷಣಾ ಸಾಕ್ಷ್ಯ ಇದೆಯೇ? ಇದ್ದರೆ ಮಂಡಿಸಿ.

ಉತ್ತರಃ

(ಮೇಲಿನ ಎಲ್ಲಾ ಪ್ರಶ್ನೆಗಳನ್ನು ಆರೋಪಿಗೆ ಓದಿ, ತಿಳಿ ಹೇಳಿದ ನಂತರ ಆರೋಪಿ ಅದನ್ನು ಅರ್ಥೈಸಿಕೊಂಡು ನಂತರ ನೀಡಿದ ಉತ್ತರಗಳನ್ನು ನಾನೇ ಸ್ವತಃ ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಡೀಕರಿಸುತ್ತೇನೆ.)

ಸಹಿ/-

(ಸಂತೋಷ ಕೊಠಾರಿ )

ದಿನಾಂಕಃ10.10.2023.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ

ವಿರಾಜಪೇಟೆ.